O.S.59/2016 Further Cross of PW 1

ದಿನಾಂಕ 17-07-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎಸ್ ಕೆ ಎಸ್ ವಕೀಲರಿಂದ.

ನಾನು ಹಾಜರುಪಡಿಸಿದ ನಿಪಿ 2 ರಲ್ಲಿ ರಸ್ತೆಯ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ 4 ಮತ್ತು 5 ರಲ್ಲಿ ಸಹ ರಸ್ತೆಯ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ 2 ರಲ್ಲಿ ತೋರಿಸಿದಂತೆ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಅರಣ್ಯ ಪ್ರದೇಶ ಎಂದು ತೋರಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಅರಣ್ಯ, ನಂತರ ರಸ್ತೆ, ನಂತರ ಅರಣ್ಯ, ಪಶ್ಚಿಮಕ್ಕೆ ರಸ್ತೆ, ಅರಣ್ಯ ಮತ್ತೆ ರಸ್ತೆ ನಂತರ ಪ್ರತಿವಾದಿಯರ ಜಮೀನು ಉತ್ತರಕ್ಕೆ ಮೌಳಂಗಿ ಮುಖ್ಯ ರಸ್ತೆ, ದಕ್ಷಿಣಕ್ಕೆ ನಮ್ಮ ಜಮೀನು ಇದೆ. ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಇರುವ ಅರಣ್ಯದ ಸರ್ವೇ ನಂಬರ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 41, 42, 43 ರಂತೆ ಹಾಜರುಪಡಿಸಿದ ಕ್ರಯ ಪತ್ರಗಳಲ್ಲಿ ರಸ್ತೆ ಇದ್ದ ಬಗ್ಗೆ ನಮೂದು ಆಗಿದೆ ಎಂದರೆ ಸಾಕ್ಷಿ ಸದರಿ ದಾಖಲೆಗಳನ್ನು ಪರಿಶೀಲಿಸಿ ರಸ್ತೆ ಇದ್ದ ಬಗ್ಗೆ ನಮೂದು ಇದೆ ಎನ್ನುತ್ತಾರೆ. ಸದರಿ ದಾಖಲೆಗಳಲ್ಲಿ ಸ್ವತ್ತುಗಳ ಯಾವ ಬದಿಗೆ ರಸ್ತೆ ಇದೆ ಎಂದು ನಮೂದು ಆಗಿದೆ ಎಂದರೆ ಸಾಕ್ಷಿ ಸದರಿ ದಾಖಲೆಗಳಲ್ಲಿ ನಮೂದು ಆಗಿಲ್ಲ ಆದರೆ ನಮ್ಮ ಗೇಟ್ ಮೌಳಂಗಿ ಮುಖ್ಯ ರಸ್ತೆ ಇದೆ. ನಿಪಿ 48 ರಂತೆ ಹಾಜರುಪಡಿಸಿದ ಪತ್ರದಲ್ಲಿ ಮುಖ್ಯ ರಸ್ತೆ ಎಂದು ನಮೂಸಿದ್ದು, ಆ ರಸ್ತೆ ಮುಖಾಂತರ ಓಡಾಡಲು ಪ್ರತಿವಾದಿ ತೊಂದರೆ ಮಾಡಿದ್ದಾರೆ ಎಂದು ಯಾರಾದರೂ ಅಥವಾ ಸಾರ್ವಜನಿಕರು ಗ್ರಾಮ ಪಂಚಾಯತಿಗೆ ಮತ್ತು ಅರಣ್ಯ ಇಲಾಖೆಗೆ ದೂರು ನೀಡಿದ್ದಾರೆಯೇ ಎಂದರೆ ಸಾಕ್ಷಿ ಅಲ್ಲಿ ಕೇವಲ ನಮ್ಮ ಮನೆ ಮಾತ್ರ ಇದೆ ಎನ್ನುತ್ತಾರೆ. ಮುಂದುವರೆದು ಆ ರಸ್ತೆಯ ಮುಖಾಂತರ ಅರಣ್ಯ ಇಲಾಖೆಯವರು ಮತ್ತು ಪಂಚಾಯತಿಯವರು ಓಡಾಡುತ್ತಾರೆ, ಆದರೆ ದೊಡ್ಡ ವಾಹನಗಳು ಬರಲು ಆಗುವುದಿಲ್ಲ ಎನ್ನುತ್ತಾರೆ. ಅರಣ್ಯ ಇಲಾಖೆಯವರು ಪ್ರತಿವಾದಿಯು ತನ್ನ ಜಮೀನಿನ ಪೂರ್ವ ಬದಿಗೆ ಅತಿ ಕ್ರಮಣ ಮಾಡಿದ್ದಾರೆ ಎಂದು ಪ್ರತಿವಾದಿಯ ವಿರುದ್ಧ ಕುರಿತು ನೊಟೀಸ ಕೊಟ್ಟಿದ್ದಾರೆಯೇ ಅಥವಾ ಕ್ರಮ ಕೈಗೊಂಡಿದ್ದಾರೆಯೇ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಹೇಳುವ ರಸ್ತೆ ಎಷ್ಟು ಅಡಿ ಉದ್ದ ಮತ್ತು ಎಷ್ಟು ಅಡಿ ಅಗಲದ ರಸ್ತೆಗೆ ಪ್ರತಿವಾದಿ ತೊಂದರೆ ಮಾಡಿದ್ದಾರೆ ಎಂದು ವಾದಪತ್ರದಲ್ಲಿ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದೀರಾ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿ

ಎಷ್ಟು ಅಡಿ ಉದ್ದ ಮತ್ತು ಎಷ್ಟು ಅಡಿ ಅಗಲದ ರಸ್ತೆಯನ್ನು ಅತಿ ಕ್ರಮಣ ಮಾಡಿ ನಿಮಗೆ ಅಡ್ಡಿ ಆತಂಕ ಪಡಿಸಿದ್ದಾರೆ ಎಂದರೆ ಸಾಕ್ಷಿ 15 ಅಡಿ ರಸ್ತೆಗೆ ಅಡೆ ತಡೆ ಮಾಡಿದ್ದಾರೆ ಎನ್ನುತ್ತಾರೆ. ನಿಪಿ 60 ರಂತೆ ಹಾಜರುಪಡಿಸಿದ ದಾಖಲೆಗಳಲ್ಲಿನ ಪಂಚನಾಮೆಯಲ್ಲಿ ರಸ್ತೆ ಅಡೆ ತಡೆ ಆದ ಬಗ್ಗೆ ನಮೂದು ಮಾಡಲಾಗಿದೆಯೇ ಎಂದರೆ ಸಾಕ್ಷಿ ಅದರಲ್ಲಿ ಅಡೆ ತಡೆ ಬಗ್ಗೆ ಬರೆದಿಲ್ಲ, ರಸ್ತೆ ಇದೆ ಎಂದು ಬರೆದಿದ್ದಾರೆ ಆದರೆ ನಮಗೆ ಅಡೆ ತಡೆ ಆಗಿದೆ ಎನ್ನುತ್ತಾರೆ.

ನಾವು ವಾಸ ಇರುವ ಮನೆಯಲ್ಲಿ ನಾವು 20 ವರ್ಷಗಳಿಂದ ವಾಸವಿದ್ದೇವೆ. ನಿಮ್ಮ ಮನೆ ಇರುವ ಜಮೀನಿನ ಚಕ್ಕು ಬಂದಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಸದರಿ ಜಮೀನಿನ ಪೂರ್ವಕ್ಕೆ ಈಸಾ ರವರ ಜಮೀನು, ದಕ್ಷಿಣಕ್ಕೆ ಅರಣ್ಯ, ಉತ್ತರಕ್ಕೆ ಇಕ್ಬಾಲ್ ರವರ ಜಮೀನು ಹಾಗೂ ಪಶ್ಚಿಮಕ್ಕೆ ನವಗ್ರಾಮ ಇದೆ. ನೀವು ಇರುವ ಮನೆಯ ಜಮೀನಿನ ಒಂದು ಕಡೆ ಬೇರೆಯವರ ಜಮೀನು, ಒಂದು ಕಡೆ ಅರಣ್ಯ, ಎರಡು ಕಡೆ ಗ್ರಾಮಠಾಣಾ ಇದೆ ಎಂದರೆ ಸರಿ. ಗ್ರಾಮಠಾಣಾ 20 ವರ್ಷಗಳ ಹಿಂದೆ ಆಗಿದೆ. ಗ್ರಾಮಠಾಣಾದಲ್ಲಿರುವ ರಸ್ತೆಗಳು ನಿಮ್ಮ ಹೊಲಕ್ಕೆ ಬಂದು ತಾಗುತ್ತವೆ ಎಂದರೆ ಸಾಕ್ಷಿ ತಾಗುತ್ತವೆ ಆದರೆ ಅದು ನಮಗೆ ಸಂಬಂಧ ಇಲ್ಲ ಎನ್ನುತ್ತಾರೆ. ನಿಪಿ 72 ರಿಂದ 81 ರ ವರೆಗಿನ ಭಾವಚಿತ್ರಗಳನ್ನು ತೆಗೆಯಿಸಿದ ಬಗ್ಗೆ ರಸೀದಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಭಾವಚಿತ್ರಗಳಲ್ಲಿ ಸಿಮೆಂಟ್ ಕಂಬಗಳು ಮತ್ತು ಸಿಮೆಂಟ್ ಪ್ಲೇಟ ಗಳು ಯಾರಿಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಅದೇ ರಸ್ತೆ ಅದರಲ್ಲೆ ತೊಂದರೆ ಮಾಡಿದ್ದಾರೆ ಎನ್ನುತ್ತಾರೆ. ಸದರಿ ಜಾಗ ನಿಮ್ಮದು ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅದು ಅರಣ್ಯದ ಜಾಗ ಎನ್ನುತ್ತಾರೆ. ಪ್ರತಿವಾದಿ ಅರಣ್ಯದ ಪ್ರದೇಶದಲ್ಲಿ ಅತಿ ಕ್ರಮಣ ಮಾಡಿದ ಬಗ್ಗೆ ಅರಣ್ಯ ಇಲಾಖೆಯವರು ಪ್ರತಿವಾದಿಗೆ ನೋಟೀಸ ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅರಣ್ಯ ಇಲಾಖೆಗೆ ನಾನು ಪತ್ರ ಬರೆದಿದ್ದೆ ಅದನ್ನು ಹಾಜರುಪಡಿಸಿದ್ದೇನೆ. ಅರಣ್ಯ ಇಲಾಖೆಯವರು ನಿಮ್ಮ ಪತ್ರದ ಆಧಾರದ ಮೇಲೆ ಕ್ರಮ ಕೈಗೊಂಡಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಅರಣ್ಯ ಪ್ರದೇಶದಲ್ಲಿ ಅತಿ ಕ್ರಮಣ ಮಾಡಿದರೆ ಅಥವಾ ಅರಣ್ಯ ಪ್ರದೇಶದಲ್ಲಿ ಚಟುವಟಿಕೆ ಮಾಡಿದರೆ ಅರಣ್ಯ ಇಲಾಖೆಯವರು ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ತನ್ನ ಎಲ್ಲಾ ಚಟುವಟಿಕೆಗಳನ್ನು ತನ್ನದೇ ಜಾಗದಲ್ಲಿ ಮಾಡಿದ್ದರಿಂದ ಅರಣ್ಯ ಇಲಾಖೆಯವರು ಪ್ರತಿವಾದಿಯರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಿಲ್ಲ. ಹಳಿಯಾಳದ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನಿಮ್ಮ ಸಹೋದರನ ವಿರುದ್ಧ ದಾವೆ ಮಾಡಲಾಗಿತ್ತು ಎಂದರೆ ಸರಿ. ಪ್ರತಿವಾದಿ ನೀವು ದಾರಿ ಉಪಯೋಗಿಸುವುದಕ್ಕೆ ಅಡ್ಡಿಪಡಿಸಿದ್ದಾರೆ ಮತ್ತು ತೊಂದರೆ ಮಾಡಿದ್ದಾರೆ ಎಂದು ಪೊಲೀಸ ಇಲಾಖೆಗೆ ದೂರು ನೀಡಿದ್ದೀರಾ ಎಂದರೆ ಸಾಕ್ಷಿ ಎರಡು ಬಾರಿ ನೀಡಿದ್ದೇನೆ ಎನ್ನುತ್ತಾರೆ. ನಿಪಿ 35

ರಂತೆ ಹಾಜರುಪಡಿಸಿದ ಭಾವಚಿತ್ರಗಳಲ್ಲಿ 8 ರಿಂದ 10, 13 ರಿಂದ 15 ನೇ ಭಾವಚಿತ್ರದಲ್ಲಿ ಕಾಣುವ ಪ್ರದೇಶ ಅರಣ್ಯ ಇಲಾಖೆಯದ್ದು. ಅರಣ್ಯ ಇಲಾಖೆಯವರು ನಿಮಗೆ ಓಡಾಡಲು ರಸ್ತೆ ಮಾಡಿಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿ ಅರಣ್ಯ ಇಲಾಖೆಯವರು ಓಡಾಡಲು ಹೇಳಿದ್ದಾರೆ ಆದರೆ ಆ ಬಗ್ಗೆ ದಾಖಲೆಗಳು ಇಲ್ಲ ಎನ್ನುತ್ತಾರೆ. ಅರಣ್ಯ ಇಲಾಖೆಯವರು ಓಡಾಡಲು ಹೇಳಿದ್ದಾರೆ ಎಂದು ತೋರಿಸಲು ಅರಣ್ಯ ಇಲಾಖೆಯವರಿಂದ ಒಂದು ಪತ್ರ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಸಾಕ್ಷಿ ಅರ್ಜಿ ಕೊಟ್ಟಿದ್ದೆ ಅವರು ಕೊಟ್ಟಿಲ್ಲ ಎನ್ನುತ್ತಾರೆ. ಅರ್ಜಿ ಕೊಟ್ಟ ಬಗ್ಗೆ ಆದ ಕ್ರಮದ ಬಗ್ಗೆ ದಾಖಲೆಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ತಾಯಿಗೆ ಗೊತ್ತು ನಾನು ಇಲ್ಲಿ ಇರುತ್ತಿರಲಿಲ್ಲ ಎನ್ನುತ್ತಾರೆ.

ದಾವೆ ಹೂಡುವ ಸಮಯದಲ್ಲಿ ನಿಮ್ಮ ತಂದೆ ಯಾರದ್ದಾದರೂ ಪ್ರಮಾಣ ಪತ್ರ ವಾದಪತ್ರಗಳೊಂದಿಗೆ ಹಾಜರುಪಡಿಸಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮನೆ ಕಟ್ಟಲು ನೀಡಿದ ಪರವಾನಿಗೆಯಲ್ಲಿ ರಸ್ತೆ ಇದ್ದ ಬಗ್ಗೆ ನಮೂದಿಸಲಾಗಿದೆಯೇ ಎಂದರೆ ಸಾಕ್ಷಿ ಸಾರ್ವಜನಿಕ ರಸ್ತೆ ಇದೆ ಎಂದು ಪರವಾನಿಗೆಯಲ್ಲಿ ನಮೂದಿಸಲಾಗಿದೆ ಎನ್ನುತ್ತಾರೆ. ಈ ಮೇಲೆ ಸದರಿ ರಸ್ತೆ ನಮ್ಮ ಸ್ವಂತ ರಸ್ತೆ ಎಂದು ಹೇಳಿದ್ದೀರಿ ಈಗ ಸಾರ್ವಜನಿಕ ರಸ್ತೆ ರಸ್ತೆ ಇದ್ದ ಬಗ್ಗೆ ಪರವಾನಿಗೆಯಲ್ಲಿ ನಮೂದಾಗಿದೆ ಎಂದು ನುಡಿಯುತ್ತೀರಿ ಯಾವುದು ಸರಿ ಎಂದರೆ ಸಾಕ್ಷಿ ನಾನು ನಮ್ಮ ರಸ್ತೆ ಎಂದು ಹೇಳಿಲ್ಲ ಎನ್ನುತ್ತಾರೆ. ನೀವು ಹೇಳುವ ಸಾರ್ವಜನಿಕ ರಸ್ತೆ ಪಂಚಾಯತಿಗೆ ಸೇರಿದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 36 ರಂತೆ ನಿಮ್ಮ ತಂದೆ ನಿಮಗೆ ಬರೆದುಕೊಟ್ಟ ಭಕ್ಷಿಸ್ ಪತ್ರದಲ್ಲಿ ರಸ್ತೆ ಇದ್ದ ಬಗ್ಗೆ ನಮೂದಾಗಿದೆಯೇ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನಂತರ ಸದರಿ ದಾಖಲೆಯನ್ನು ಪರಿಶೀಲಿಸಿ ರಸ್ತೆ ಇದೆ, ಅದರಲ್ಲಿ ಬರೆದಿದೆ ಎನ್ನುತಾ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ರಸ್ತೆ ಎಷ್ಟು ಅಡಿ ಉದ್ದ ಎಷ್ಟು ಅಡಿ ಅಗಲ ಎಂದು ನಮೂದಿಸಲಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.